## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
## Bangalore Development Authority

GST : 29AAALV0060O1ZS
PLO No: 157880

000081

ಸಂಖ್ಯೆ: ಬೆಂಅಪ್ರಾ/ನಯೋಅ/CLU-67/2021-22/ 1021 /2022-23
No:

ದಿನಾಂಕ:
Date: 02/08/2022

ಇವರಿಗೆ

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿ ತಿಪ್ಪಸಂದ್ರ ಗ್ರಾಮದ ಸರ್ವೆ ನಂ. 2/1ರಲ್ಲಿ 12 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ.

ಉಲ್ಲೇಖ: 1) ಶ್ರೀ ಬಿ. ಶಿವಣ್ಣ ರವರ ಅರ್ಜಿ ದಿನಾಂಕ 24.09.2021.
2) ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 2.1.23/2022, ದಿನಾಂಕ 22.06.2022

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಅರ್ಜಿದಾರರಾದ ಶ್ರೀ ಬಿ. ಶಿವಣ್ಣರವರು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿ ತಿಪ್ಪಸಂದ್ರ, ಗ್ರಾಮದ ಸರ್ವೆ ನಂ. 2/1ರಲ್ಲಿ 12 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ.

ಸರ್ಕಾರದಿಂದ ಅನುಮೋದನೆಯಾಗಿರುವ RMP-2015 ರಲ್ಲಿ ಪ್ರಶ್ನಿತ ಜಮೀನನ್ನು ವ್ಯವಸಾಯ ವಲಯಕ್ಕಾಗಿ ವರ್ಗೀಕರಿಸಿದೆ. ಮತ್ತು ಅತ್ಯಲ್ಪ ಭಾಗವನ್ನು ವ್ಯಾಲಿ ಬಫರ್ ವಲಯಕ್ಕಾಗಿ ವರ್ಗೀಕರಿಸಲಾಗಿದೆ.

ಪ್ರಸ್ತಾವನೆ ಸಂಬಂಧ ಪ್ರಾಧಿಕಾರದ ಭೂಸ್ವಾಧೀನ ವಿಭಾಗದಿಂದ ವರದಿಯನ್ನು ಪಡೆಯಲಾಗಿದ್ದು, ಬೆಂಗಳೂರು ನಗರ ಆನೇಕಲ್ ತಾಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿ ತಿಪ್ಪಸಂದ್ರ ಗ್ರಾಮದ ಸರ್ವೆ ನಂ. 2/1ರ ಜಮೀನನ್ನು ಈ ವಿಭಾಗದಿಂದ ಯಾವುದೇ ಯೋಜನೆಗಾಗಲೀ, ಭೂಸ್ವಾಧೀನ ಪಡೆಯಲು ಇದುವರೆಗೂ ಅಧಿಸೂಚನೆ ಹೊರಡಿಸಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ.

2.....

ವಿಷಯ: ಆನೇಕಲ್ ತಾಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿ ತಿಪ್ಪಸಂದ್ರ ಗ್ರಾಮದ ಸರ್ವೆ ನಂ. 2/1ರಲ್ಲಿ 12 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ.

---

ಸ್ಥಳ ಪರಿಶೀಲಿಸಲಾಗಿದ್ದು, ಪ್ರಶ್ನಿತ ಜಮೀನು ದೊಮ್ಮಸಂದ್ರದಿಂದ ವರ್ತೂರಿಗೆ ಹೋಗುವ ಮುಖ್ಯರಸ್ತೆಯ ಎಡಭಾಗದಲ್ಲಿ ನೆಕ್ಕುಂದಿ ಜನತಾ ಕಾಲೋನಿ ಮುಖಾಂತರ 8.0 ಮೀ. ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಪ್ರಶ್ನಿತ ಜಮೀನಿನ ಪೂರ್ವಕ್ಕೆ ನೆಕ್ಕುಂದಿ ದೊಮ್ಮಸಂದ್ರ ಗ್ರಾಮದ ಸರ್ವೆ ನಂ. 49ರಲ್ಲಿ ಕೆರೆಯಿರುವುದು ಗ್ರಾಮನಕ್ಷೆಯಲ್ಲಿ ಮತ್ತು ಪ್ರಾಧಿಕಾರದ ಭೂಸ್ವಾಧೀನ ವಿಭಾಗದವರು ದೃಢೀಕರಿಸಿ ಸಲ್ಲಿಸಿರುವ ಸರ್ವೆ ನಕ್ಷೆಯಲ್ಲಿಯೂ ಸಹ ಕಂಡು ಬಂದಿರುತ್ತದೆ. ಸದರಿ ಕೆರೆಯಲ್ಲಿ ನೆಕ್ಕುಂದಿ ದೊಮ್ಮಸಂದ್ರ ಜನತಾ ಕಾಲೋನಿ ನಿರ್ಮಾಣವಾಗಿ ಮನೆಗಳು ಇರುವುದು ಸ್ಥಳ ಪರಿಶೀಲನಾ ಸಮಯದಲ್ಲಿ ಕಂಡುಬಂದಿರುತ್ತದೆ. ಪ್ರಶ್ನಿತ ಜಮೀನಿಗೆ 9.00 ಮೀ. ಅಗಲದ ರಸ್ತೆ ಸಂಪರ್ಕ ಇರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಆನೇಕಲ್ ರವರು ರಸ್ತೆಯ ಬಗ್ಗೆ ಮಾಹಿತಿ ಪತ್ರ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಕೆಟಿಸಿಪಿ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಪರಿಶೀಲಿಸುವ ಸಂಬಂಧ ದಿನಾಂಕ 05.02.2022 ರಂದು ಸ್ಥಳೀಯ ದಿನಪತ್ರಿಕೆಗಳಾದ ಕನ್ನಡಪ್ರಭ (ಕನ್ನಡ) ಮತ್ತು ದಿ ಹಿಂದೂ (ಆಂಗ್ಲ) ಪತ್ರಿಕೆಗಳಲ್ಲಿ, ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಕುರಿತಂತೆ ಯಾರಿಂದಲಾದರೂ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಲಿಖಿತವಾಗಿ ಸಲ್ಲಿಸಲು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯು ಪ್ರಕಟಣೆಯಾದ ದಿನಾಂಕದಿಂದ ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ.

ಪ್ರಸ್ತಾವನೆಯನ್ನು ಉಲ್ಲೇಖ (2) ರಂತೆ ದಿನಾಂಕ 22.06.2022 ರಂದು ನಡೆದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಮುಂದೆ ಮಂಡಿಸಲಾಗಿತ್ತು. ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

> "ಪ್ರಶ್ನಿತ ಜಮೀನು ಹಲಸಹಳ್ಳಿ ಗ್ರಾಮಕ್ಕೆ ಜನತಾ ಕಾಲೋನಿ ಮುಖಾಂತರ ಹೋಗುವ 8.0ಮೀ ಅಗಲದ ಹಾಲಿ ರಸ್ತೆಯಿಂದ ಪ್ರಶ್ನಿತ ಜಮೀನು ಸಂಪರ್ಕ ಹೊಂದಿದ್ದು, ಕಂದಾಯ ದಾಖಲೆಗಳಂತೆ ನೆಕ್ಕುಂದಿದೊಮ್ಮಸಂದ್ರ ಗ್ರಾಮದ ಸರ್ವೆ ನಂ.49 ರಲ್ಲಿ ಕೆರೆಗೆ ಹೊಂದಿಕೊಂಡಿದ್ದು, ಆದರೆ ಕಂದಾಯ ದಾಖಲೆಗಳಲ್ಲಿ ಕೆರೆ ಎಂದು ಗುರುತಿಸಿರುವ ಸರ್ವೆ ನಂ.49 ರ ಪ್ರದೇಶದಲ್ಲಿ ಜನತಾ ಕಾಲೋನಿ ಇರುವುದನ್ನು ಹಾಗೂ ಪ್ರಶ್ನಿತ ಜಮೀನಿನ ಸುತ್ತಮುತ್ತಲ್ಲಿ ವಸತಿ ಬೆಳವಣಿಗೆಗಳು ಬಂದಿರುವುದನ್ನು ಸಭೆಯು ಗಮನಿಸಿತು. ಕಂದಾಯ ದಾಖಲೆಗಳಂತೆ ಇರುವ ಕೆರೆ ಹಾಗೂ ನಾಲಾಗಳಿಗೆ ವಲಯ

3.....

000080



ವಿಷಯ: ಆನೇಕಲ್ ತಾಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿ ತಿಪ್ಪಸಂದ್ರ, ಗ್ರಾಮದ ಸರ್ವೆ ನಂ. 2/1ರಲ್ಲಿ 12 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ.

---

ನಿಯಮಾವಳಿಗಳನ್ವಯ ಅಗತ್ಯ ಬಫರ್ ಅಳವಡಿಸುವ ಹಾಗೂ ಪ್ರಶ್ನಿತ ಜಮೀನಿನಲ್ಲಿ ಇರುವ ಹಾಲಿ ಕಟ್ಟಡವನ್ನು ತೆರವುಗೊಳಿಸುವ ಷರತ್ತುಗಳಿಗೊಳಪಡಿಸಿ, ಆನೇಕಲ್ ತಾಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿ ತಿಪ್ಪಸಂದ್ರ ಗ್ರಾಮದ ಸರ್ವೆ ನಂ. 2/1ರಲ್ಲಿ 12 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಶ್ನಿತ ಜಮೀನಿನ ಭೂಉಪಯೋಗಕ್ಕೆ ಬದಲಾವಣೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ಕ್ರಯಪತ್ರ, ಆಕಾರ್ ಬಂದ್, ಋಣಭಾರರಾಹಿತ್ಯ, ಪ್ರಮಾಣ ಪತ್ರ, ಮ್ಯುಟೇಷನ್ ಪ್ರತಿ, ಆರ್.ಟಿ.ಸಿ., ಗ್ರಾಮನಕ್ಷೆ, RMP-2015 ರ ಉದ್ಧೃತ ಭಾಗ, ಸರ್ವೆ ನಕ್ಷೆ, ಗೂಗಲ್ ನಕ್ಷೆ, ಪ್ರಮಾಣ ಪತ್ರಗಳು, ಪರಿಶೀಲನಾ ಪಟ್ಟಿ, ಪ್ರಾಧಿಕಾರದ ಸಮಿತಿ ಸಭೆಯ ಟಿಪ್ಪಣಿ, ತೀರ್ಮಾನದ ಪ್ರತಿ ಹಾಗೂ ಪತ್ರಿಕಾ ಪ್ರಕಟಣೆ ಪ್ರತಿಯನ್ನು (ಕನ್ನಡ ಮತ್ತು ಆಂಗ್ಲ) ಈ ಪತ್ರದೊಂದಿಗೆ ಲಗತ್ತಿಸಿ, ಆನೇಕಲ್ ತಾಲೂಕು, ಸರ್ಜಾಪುರ ಹೋಬಳಿ, ಹಲಸಹಳ್ಳಿ ತಿಪ್ಪಸಂದ್ರ ಗ್ರಾಮದ ಸರ್ವೆ ನಂ. 2/1ರಲ್ಲಿ 12 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಹಾಗೂ ಕೆಟಿಸಿಪಿ ಕಾಯ್ದೆಯ 1961 ರ ಕಲಂ 14(ಎ) ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಪರಿಶೀಲನಾ ಪಟ್ಟಿಯೊಂದಿಗೆ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

29/07

ಆಯುಕ್ತರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,

ಬೆಂಗಳೂರು.

ಪ್ರತಿಯನ್ನು:- ಶ್ರೀ ಬಿ. ಶಿವಣ್ಣ ಬಿನ್ ಲೇಟ್ ಬೋಳಪ್ಪ, ನಂ. ಎಂ.ಐ.ಜಿ. 291, 'ಎ' ಬ್ಲಾಕ್, ಸೂರ್ಯನಗರ, 1ನೇ ಹಂತ, ಓವರ್ ಹೆಡ್ ಟ್ಯಾಂಕ್ ಹಿಂಭಾಗ, ಚಂದಾಪುರ, ಆನೇಕಲ್ ಮುಖ್ಯರಸ್ತೆ, ಬೆಂಗಳೂರು-560 099 ರವರಿಗೆ ಮಾಹಿತಿಗಾಗಿ ಕಳುಹಿಸಿದೆ.